

ಡಾ.ವಿನೋದ ಛೆಬ್ಬಿ

**ನಮ್ಮ ಖಾಸಗಿ ಕಲ್ಪನೆಗಳನ್ನು ಸಂಗಾತಿಯ ಎದುರು ಬಿಚ್ಚಿಡದಿದ್ದರೆ ಅಪರಿಚಿತರಾಗಿಯೇ ಉಳಿಯುತ್ತೇವೆ!**

# 173: ಕಾಮುಕತೆ ಬೇಕೆ?

ಹಳೆಯದು ಎನಿಸಿದ ದಾಂಪತ್ಯದ ಕಾಮಕ್ರಿಯೆಗೆ ಹೊಸತನ ತರುವುದರ ಬಗೆಗೆ ಚರ್ಚಿಸುತ್ತಿದ್ದೇವೆ. ಹೋದಸಲ ಭಾವೋದ್ರೇಕವನ್ನು ತರುವುದು ಹೇಗೆ ಎಂದು ಹೇಳುತ್ತಿದ್ದೆ. ಈ ಸಲ ಕಾಮದ ಕಲ್ಪನೆಗೆ ಹೊಸ ಆಯಾಮಗಳನ್ನು ತರುವುದರ ಬಗೆಗೆ ಮಾತಾಡೋಣ.

ಸಾಮಾನ್ಯವಾಗಿ ನಡೆಯುವ ದಾಂಪತ್ಯದ ನಮೂನೆಯನ್ನು ತೆಗೆದುಕೊಳ್ಳಿ. ಮದುವೆಯಾಗಿ 25 ವರ್ಷಗಳಾಗಿವೆ. ಕಾಮಕೂಟ ವರ್ಷಕ್ಕೊಮ್ಮೆಯೂ ನಡೆಯುತ್ತಿಲ್ಲ. ಹಾಸಿಗೆಯಲ್ಲಿ ಒಟ್ಟಿಗಿದ್ದರೂ ಏಕಾಂಗಿ ಆಗಿದ್ದಾರೆ. ಮೈಗೆ ಮೈ ತಾಗಿದಾಗ, ತನಗೆ ಕಾಮಾಸಕ್ತಿ ಇಲ್ಲವಲ್ಲ, ಇದ್ದರೆ ಹೇಗಿರುತ್ತಿತ್ತು ಎಂದು ಇಬ್ಬರೂ ಯೋಚಿಸುತ್ತಾರೆ. ಕಾಮಾಸಕ್ತಿ ಇಲ್ಲದೆ ಮುಂದುವರಿದರೆ ಏನು ನಿರಾಸೆ ಎದುರಿಸಬೇಕಾಗಿ ಬರಬಹುದೋ ಎಂಬ ಅಳುಕು ಇಬ್ಬರಲ್ಲೂ ಬಲವಾಗಿದೆ. ಇಲ್ಲೇನು ನಡೆಯುತ್ತಿದೆ? ಇದನ್ನು ಒಂದು ಪರಿಕಲ್ಪನೆಯ ಮೂಲಕ ಮುಂದಿಡುತ್ತಿದ್ದೇನೆ.

ನಮಗೆ ವಯಸ್ಸಾದಂತೆ ನಮ್ಮ ತಿಳಿವಳಿಕೆ ಹಾಗೂ ದುಡಿಮೆಗೆ ತಕ್ಕಂತೆ ಜ್ಞಾನಭಂಡಾರ ಹಾಗೂ ಆಸ್ತಿಪಾಸ್ತಿ ಹೆಚ್ಚುತ್ತ ಹೋಗುತ್ತದಲ್ಲವೆ? ಅದೇ ರೀತಿ ನಮ್ಮ ಕಾಮುಕತೆಯ ಭಂಡಾರವೂ (sexual repertoire) ಹದಿವಯಸ್ಸಿನಿಂದ ಹೆಚ್ಚುತ್ತ ಹೋಗುತ್ತದೆ. (ನಾನಿಲ್ಲಿ ಬೇಕೆಂದೇ 'ಕಾಮುಕತೆ' ಎಂಬ ಪದವನ್ನು ಬಳಸಿದ್ದೇನೆ. ಈ ಪದಕ್ಕೆ ಅಂಟಿರುವ ಪೂರ್ವಾಗ್ರಹ ಪೀಡಿತ ಅನಿಸಿಕೆಯನ್ನು ಪಕ್ಕಕ್ಕಿಟ್ಟು ಯೋಚಿಸಿದರೆ ಇದಕ್ಕೆ ಆರೋಗ್ಯಕರ ಅರ್ಥವೂ ಇದೆ ಎಂಬುದು ನಿಚ್ಚಳವಾಗುತ್ತದೆ.) ನಮ್ಮ ಕಾಮುಕತೆಯ ಭಂಡಾರದಲ್ಲಿ ನಮ್ಮ ಆದಿಮ ಕಲ್ಪನೆಯ ಹಸಿಕಾಮ, ನಾವು ಬೆಳೆಸಿಕೊಂಡಿರುವ ಕಾಮದ ಪ್ರತಿಮೆಗಳು ಹಾಗೂ ರೂಪಕಗಳು, ನಾವು ಕಾಮವನ್ನು ವ್ಯಕ್ತಪಡಿಸುವ ಶೈಲಿ–ಛಾಯೆಗಳು, ನಾವು ಪರರನ್ನು ಕಾಮಭರಿತ ವ್ಯಕ್ತಿಗಳನ್ನಾಗಿ ಅರ್ಥೈಸಿಕೊಳ್ಳುವ ರೀತಿ– ಮುಂತಾದವುಗಳು ಒಳಗೊಂಡಿವೆ. ಇವೆಲ್ಲ ತೀರಾ ವೈಯಕ್ತಿಕವಾಗಿ ಖಾಸಗಿಯಾಗಿದ್ದು, ಇವುಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಅವಕಾಶವಿಲ್ಲ. ಹಾಗಾಗಿ ಪ್ರತ್ಯಕ್ಷವಾಗಿ ಆಗದ್ದನ್ನು ಪರೋಕ್ಷವಾಗಿ ಪ್ರಕಟಿಸುತ್ತೇವೆ (ಉದಾ. ಖಾಸಗಿ ಭಾಗಗಳು ತೋರುವಂತೆ ಉಡುಪು ಧರಿಸುವುದು, ಎದ್ದುಕಾಣುವ ಲಿಪ್‌ಸ್ಟಿಕ್ ಹಚ್ಚಿಕೊಳ್ಳುವುದು ಇತ್ಯಾದಿ). ನೆಚ್ಚಿನ ಸಂಗಾತಿಯ ಎದುರು ಕೂಡ ಖಾಸಗಿ ಕಾಮಭಂಡಾರವನ್ನು ಬಿಚ್ಚಿಡಲು ಸಂಕೋಚ ಆಗುವುದು ಸಹಜ. ಆದರೆ ಬಿಚ್ಚಿಡದಿದ್ದರೆ ಕಲ್ಪನೆಗಳು 'ನನ್ನವು ಮಾತ್ರ' ಅನ್ನಿಸಿಕೊಳ್ಳುತ್ತವೆಯೇ ವಿನಾ 'ನಮ್ಮವು' ಅನ್ನಿಸಿಕೊಳ್ಳಲಾರದೆ ಸಂಗಾತಿಗೆ ಭಾಗಶಃ ಅಪರಿಚಿತರಾಗಿಯೇ ಉಳಿಯುವ ಸಂಭವವಿದೆ. ಇದರ ಅಡ್ಡಪರಿಣಾಮಗಳು ಹಲವಿವೆ: ಸಂಗಾತಿಯಿಂದ ಮುಚ್ಚಿದ್ದೇನೆಂದು ತಪ್ಪಿತಸ್ಥ ಭಾವ ಕಾಡಬಹುದು. ಇಬ್ಬರ ಕಲ್ಪನೆಗಳು ಒಂದೇ ಸ್ತರದಲ್ಲಿ ಸಂಪರ್ಕಿಸದೆ ಇರುವುದರಿಂದ ಅನ್ಯೋನ್ಯತೆ ಹುಟ್ಟಲಿಕ್ಕಿಲ್ಲ. ಆಗ ಕಾಮಕ್ರಿಯೆಯು ಶರೀರಗಳಿಗೆ ಮಾತ್ರ ಸೀಮಿತವಾಗಿ ಉಳಿದುಬಿಡಬಹುದು. ಇಂಥ ಕೂಟಗಳು ಕ್ರಮೇಣ ಅರ್ಥ ಕಳೆದುಕೊಂಡು ಕಾಮನಿರಾಸಕ್ತಿ ಮೂಡಬಹುದು. ಅದುಮಿಟ್ಟ ಖಾಸಗಿ ಬಯಕೆಗಳು ನೀಲಿ ಚಿತ್ರಗಳ ಗೀಳಿನಲ್ಲೋ ಪರಸಂಬಂಧದಲ್ಲೋ ಬಯಲಿಗೆ ಬರಬಹುದು ಇತ್ಯಾದಿ. ಆರೋಗ್ಯಕರ ಲೈಂಗಿಕತೆಯ ದೃಷ್ಟಿಕೋನದಿಂದ ಹೇಳುವುದಾದರೆ, ಮನವೊಪ್ಪಿ ಕೂಡುವ ಸಂಗಾತಿಗಳು ತಮ್ಮ ಕಾಮಭಂಡಾರವನ್ನು ತೆರೆದಿಟ್ಟು ಪರಸ್ಪರ ಕಾಮುಕರಾಗಿ ವರ್ತಿಸುವಾಗ ಮಾತ್ರ ರೋಚಕ ಕೂಟ ನಡೆಯಲು ಸಾಧ್ಯವಿದೆ. ಇದನ್ನು ಹೇಗೆ ಕೈಗೂಡಿಸಬೇಕು ಎನ್ನುವುದನ್ನು ನೋಡೋಣ.

ನಿಮ್ಮ ಕಾಮಕ್ಕೆ ಹೊಸ ಆಯಾಮ: ಕಾಮಕೂಟದಲ್ಲಿ ಹೊಸತನ ತರಬೇಕಾದರೆ ನಿಮ್ಮ ಕಾಮುಕತೆಗೆ ಹೊಸ ಆಯಾಮವನ್ನು ಸೇರಿಸಬೇಕಾಗುತ್ತದೆ. ಮನೋಲೈಂಗಿಕ ಚಿಕಿತ್ಸಕ ಡೇವಿಡ್ ಸ್ನಾರ್ಷ್‌ನ ಪ್ರಕಾರ ಇದರಲ್ಲಿ ಮೂರು ಅಂಶಗಳು ಬೇಕು: 1) ಕಾಮಪ್ರಚೋದನೆಗೆ ಒಳಗಾಗುವ ಸಾಮರ್ಥ್ಯ; 2) ಕಾಮಾಸಕ್ತಿ; ಹಾಗೂ 3) ಸಂಗಾತಿಯ ಜೊತೆಗೆ ಭಾವೋದ್ರೇಕದಲ್ಲಿ ಒಂದಾಗುವ ಬಯಕೆ. ಮೂರನೆಯದರ ಬಗೆಗೆ ಮುಂಚಿನ ಕಂತಿನಲ್ಲಿ ವಿವರಿಸಿದ್ದೇನೆ. ಉಳಿದೆರಡರ ಬಗೆಗೆ ತಿಳಿಯೋಣ.

ಕಾಮಪ್ರಚೋದನಾ (eroticism) ಸಾಮರ್ಥ್ಯ: ಕಾಮಪ್ರಚೋದನೆಯನ್ನು ಹೆಚ್ಚಿಸಲು ವೈಯಕ್ತಿಕವಾಗಿ ಕಾಮದ ಕಲ್ಪನೆಯನ್ನು ಕೆರಳಿಸುವ ಯಾವುದೇ ಸಾಮಗ್ರಿಯೂ ಆಗಬಹುದು. ಉದಾಹರಣೆಗೆ, ಹೆಣ್ಣುಗಂಡುಗಳ ಶರೀರದ ಭಾಗಗಳನ್ನು ನೆನಪಿಗೆ ತರುವ ವಸ್ತುಗಳು, ಹಾಗೂ ಚಿತ್ರಗಳು, ವಿಶಿಷ್ಟ ಒಳವುಡುಪು (ಉದಾ. ಏಕಾಂತದಲ್ಲಿ ಹೆಂಗಸರ ಉಡುಪು ಧರಿಸುತ್ತ ಉದ್ರೇಕಗೊಳ್ಳುವ ಗಂಡಸರು) ಇಂತಿಂಥ ಸ್ವರ, ವಾಸನೆ, ನಡಿಗೆ ಇತ್ಯಾದಿ. ಪತ್ರಿಕೆಗಳಲ್ಲಿ ಅಚ್ಚಾಗುವ ಸ್ತ್ರೀಪುರುಷರ ಆಕರ್ಷಕ ಚಿತ್ರಗಳಂತೂ ಸರಿಯೆ. ರಸ್ತೆಯಲ್ಲಿ ಅಪರಿಚಿತರ ಎದೆ–ತೊಡೆಗಳು ಥಟ್ಟನೆ ಕಂಡು ಕಣ್ಣು ಕೀಳಲಾಗದೆ ಪೇಚಿಗೆ ಬಿದ್ದಿರಬಹುದು. (ಓದಿದ್ದು: ಪ್ಯಾರಿಸ್‌ನ ಸಮ್ಮೇಳನದಲ್ಲಿ ನಾಯಕ ನೆಪೋಲಿನ್‌ನ ಆಳೆತ್ತರ ಚಿತ್ರವಿತ್ತು. ಪ್ರತಿನಿಧಿಯೊಬ್ಬರು ಅದನ್ನು ತೆಗೆದು ಹಾಕಲು ಸೂಚಿಸಿದರಂತೆ. ಯಾಕೆ? ಆತನ ಕಾಲುಗಳು ಕಾಮಪ್ರಚೋದಕ ಆಗಿದ್ದುವಂತೆ!) ಇಂಥ ವಿಷಯಗಳು ತೀರಾ ವೈಯಕ್ತಿಕವಾಗಿದ್ದು, 'ನಾನು ಹೀಗೆ' ಎಂದು ನಮ್ಮ ವಿಲಕ್ಷಣತೆಯನ್ನು ಎತ್ತಿ ತೋರಿಸುತ್ತವೆ – ಹಾಗಾಗಿಯೇ ಸಂಗಾತಿಯ ಮುಂದೆ ಬಿಚ್ಚಲು ಸಂಕೋಚ ಆಗುತ್ತದೆ. ಹಾಗೆಂದು ರಹಸ್ಯವಾಗಿ ಇರದೆ, ನಾವು ಬಯಸುವ ಕಾಮಕ್ರಿಯೆಯ ಮೂಲಕ ಪ್ರಕಟವಾಗುತ್ತಲೇ ಇರುತ್ತವೆ. ಇವುಗಳನ್ನು ಬಯಲಿಗೆ ತರದಿದ್ದರೆ ಕಾಮಕೂಟದಲ್ಲಿ ಆಸಕ್ತಿಯೇ ಹುಟ್ಟಲಿಕ್ಕಿಲ್ಲ. ಉದಾ. ಒಬ್ಬನ ಹೆಂಡತಿಯು ದಪ್ಪಗೆ ಇದ್ದುದರಿಂದ ಆಕೆಯಲ್ಲಿ ಕಾಮಾಸಕ್ತಿ ಕಡಿಮೆಯಾಗಿತ್ತು. ಸಣ್ಣ ನಡುವಿನ ನಟಿಯನ್ನು ಕಂಡರೆ ಕಾಮ ಕೆರಳುತ್ತಿತ್ತು. ಅವನೇನು ಮಾಡಿದ? ಹೆಂಡತಿಗೆ ತೂಕ ಇಳಿಸಿಕೊಳ್ಳಲು ಉಪದೇಶಿಸುವ ಮೂರ್ಖತನ ಮಾಡಲಿಲ್ಲ. ಬದಲಾಗಿ, ಆಕೆಗೆ ಸಮಸ್ಯೆಯನ್ನು ಹಂಚಿಕೊಂಡ. ಕನ್ನಡಿಯ ಎದುರು ಆಕೆಯನ್ನು ನಗ್ನವಾಗಿ ನಿಲ್ಲಿಸಿ ವಿವಿಧ ಭಂಗಿಗಳಲ್ಲಿ ವೀಕ್ಷಿಸಿದ. ಒಂದು ಭಂಗಿಯಲ್ಲಿ ಸೊಂಟವು ತೆಳ್ಳಗೆ ಕಂಡಾಗ ಅವಳನ್ನು ಬಿಗಿದಪ್ಪುತ್ತ ಉದ್ರೇಕಕ್ಕೆ ಒಳಗಾದ. ಆದರೆ ಎಲ್ಲರೂ ಹೀಗೆಯೇ ಯೋಚಿಸಲಾರರು. ಒಬ್ಬನು ಸುಸ್ವಭಾವದ ಹೆಂಡತಿಯ ಜೊತೆಗೆ ನಾಲ್ಕು ವರ್ಷಗಳಾದರೂ ಕೂಡಿರಲಿಲ್ಲ. ಯಾಕೆ? ಆಕೆಯ ಮೈ ಮೃದುವಾಗಿಲ್ಲದೆ 'ಗಂಡಸರಂತೆ' ಗಟ್ಟಿಯಾಗಿದ್ದರಿಂದ ಆತನಿಗೆ ಕಾಮಪ್ರಚೋದನೆ ಆಗುತ್ತಿರಲಿಲ್ಲ. ಹಾಗಾಗಿ ದಾಂಪತ್ಯ ಮುರಿದುಕೊಳ್ಳಲು ನಿಶ್ಚಯಿಸಿ ನನ್ನಲ್ಲಿಗೆ ಕರೆತಂದ. ಚರ್ಚೆಯಲ್ಲಿ ಗೊತ್ತಾಗಿದ್ದು ಏನೆಂದರೆ, ಅವನಲ್ಲಿ ಖಾಸಗಿ ಕಾಮಭಂಡಾರ ಬೆಳೆದೇ ಇರಲಿಲ್ಲ. ಹಾಗಾಗಿ ಹೆಣ್ಣಿನ ಖಾಸಗಿ ಭಾಗಗಳ ಬಗೆಗೆ ಕಾಮುಕತೆ ಹೊಂದಿರದೆ ಮೈಕೈ ಮುಟ್ಟುವಷ್ಟಕ್ಕೆ ಮಾತ್ರ ಸೀಮಿತವಾಗಿದ್ದು, ಅಷ್ಟಕ್ಕೇ ಉದ್ರೇಕ ಆಗಬೇಕು ಎಂದು ನಂಬಿದ್ದ. ಚಿಕಿತ್ಸೆಯಲ್ಲಿ ಅವನಿಗೆ ಹೆಣ್ಣಿನ ಮೃದುಭಾಗಗಳಾದ ಸ್ತನಗಳು, ಜನನಾಂಗಗಳನ್ನು ಮೃದುತ್ವದ ಅರಿವಾಗುವಂತೆ ನವಿರಾಗಿ ಸ್ಪರ್ಶಿಸಲು ಕಲಿಸಿಕೊಟ್ಟು, ಅದರಲ್ಲಿ ಮಗ್ನನಾಗಲು ಪ್ರೋತ್ಸಾಹಿಸಿದಾಗ ಹೆಂಡತಿಯಲ್ಲಿ ಕಾಮೋದ್ರೇಕ ಹುಟ್ಟಲು ಶುರುವಾಯಿತು. ಇನ್ನು, ಸಹಜವಾದ ಕಾಮುಕತೆಯನ್ನು ಅಸಹಜ ಎಂದು ತಿಳಿಯುವ ಸಂಭವವೂ ಇದೆ. ಉದಾ. ಒಬ್ಬಳು ತನ್ನ ವ್ಯವಹಾರದಲ್ಲಿ ಹೊಸಬರು ಗಂಡಸರ ಎದುರು ಕೂಡಬೇಕಾಗುತಿತ್ತು. ಆಗ ಆಕೆಯ ಗಮನವು ಬಲವಂತವಾಗಿ ಅವರ ಜನನಾಂಗದ ಕಡೆಗೆ ಹರಿಯುತ್ತಿತ್ತು. ಇದರಿಂದ ಕಸಿವಿಸಿಯಾಗಿ ನೋಟ ಕೀಳುವ ಒದ್ದಾಟ ನಡೆಸುತ್ತಿದ್ದಳು. ಆಕೆಯನ್ನು ವಶೀಕರಣಕ್ಕೆ ಒಳಪಡಿಸಿದಾಗ ಆಕೆಯ ಕಲ್ಪನೆಯಲ್ಲಿ ಗಂಡಸಿನ ಜನನಾಂಗವನ್ನು ವೀಕ್ಷಿಸುವ ಬಯಕೆಯಿರುವುದು ಗೊತ್ತಾಗಿ, ತನ್ನ 'ಕೀಳುತನ' ಕಂಡು ಕೊರಗು ಹೆಚ್ಚಾಯಿತು. ಆಕೆಯ ಕುತೂಹಲವು ಸಹಜವಾದುದೆಂದೂ, ಇದು ಅನೇಕ ಹೆಂಗಸರಿಗೆ ಇದ್ದರೂ ಅವರು ಇವಳಷ್ಟು ನೇರವಾಗಿ ಗಂಡಸರ ಸಂಪರ್ಕಕ್ಕೆ ಬರದೆ ಇರುವುದರಿಂದ ಅದು ಬಯಲಿಗೆ ಬರುವುದಿಲ್ಲವೆಂದೂ ಹೇಳಿಕೊಟ್ಟು, ರಬ್ಬರ್ ಶಿಶ್ನದ ಹಲವು ಮಾದರಿಗಳನ್ನು ಮುಟ್ಟಲು ಕೈಗಿತ್ತೆ. ಅವುಗಳನ್ನು ಸ್ಪರ್ಶಿಸಿ ಅನುಭವಿಸಿದ ನಂತರ ಸಮಸ್ಯೆ ಸರಿಹೋಯಿತು.

ಕಾಮಾಸಕ್ತಿಯನ್ನು ಪ್ರೀತಿಯೊಡನೆ ಬಳಸಿಕೊಳ್ಳುವುದರ ಬಗೆಗೆ ಮುಂದಿನ ಸಲ ತಿಳಿಯೋಣ.